# ನೇರ ಫೋನ್ ಇನ್ ಬಾನುಲಿ ಕಾರ್ಯಕ್ರಮ ಇಂದು

• **ಹಳಿಯಾಳ:** ದ್ವಿತೀಯ ಪಿಯುಸಿ ಮುಗಿಸಿ ಉನ್ನತ ಶಿಕ್ಷಣ ಆಕಾಂಕ್ಷಿ ವಿದ್ಯಾರ್ಥಿಗಳಿಗೋಸ್ಕರ ಕೆಎಲ್ಎಸ್ ವಿಡಿಐಟಿ ಹಳಿಯಾಳವು ಸಿಇಟಿ ಕೌನ್ಸಿಲಿಂಗ್ ಮಾರ್ಗದರ್ಶಿ ನೇರ ಫೋನ್ ಇನ್ ಬಾನುಲಿ ಕಾರ್ಯಕ್ರಮವನ್ನು ಜು.18 ರಂದು ಆಯೋಜಿಸಿದೆ. ಆಕಾಶವಾಣಿ ಧಾರವಾಡ ಕೇಂದ್ರದ 765 KHz ಕಂಪನಾಂಕದಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 12ರ ವರೆಗೆ ಜರುಗಲಿರುವ ಈ ಕಾರ್ಯಕ್ರಮಕ್ಕೆ ವಿಷಯ ತಜ್ಞರಾಗಿ ಶಿರಸಿ ಮಾರಿಕಾಂಬಾ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಬಾಲಚಂದ್ರ ಭಟ್, ವಿಡಿಐಟಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥ ಹಾಗೂ ಈ ಕಾರ್ಯಕ್ರಮದ ಸಂಚಾಲಕ ಡಾ. ಮಹೇಂದ್ರ ದೀಕ್ಷಿತ್, ಟ್ರೈನಿಂಗ್ ಆಂಡ್ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ಸುಧೀರ್ ಕುಲಕರ್ಣಿ ಉಪಸ್ಥಿತರಿರುವರು . ಸಿಇಟಿ ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಪ್ರಕ್ರಿಯೆ, ಸೀಟು ಆಯ್ಕೆ ಪ್ರಕ್ರಿಯೆ ಹಾಗೂ ಇನ್ನೂ ಹತ್ತು ಹಲವು ಸೂಕ್ಷ್ಮ ಮತ್ತು ಉಪಯುಕ್ತ ಮಾಹಿತಿ ನೀಡಲಿದ್ದಾರೆ. ಅಲ್ಲದೇ ವಿದ್ಯಾರ್ಥಿಗಳಲ್ಲಿ ಸಿಇಟಿ ಪ್ರಕ್ರಿಯೆ ಕುರಿತು ಇರುವ ಸಂದೇಹಗಳನ್ನು ನಿವಾರಿಸಲಿದ್ದಾರೆ. ಈ ಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳಲು ದೂರವಾಣಿ ಸಂಖ್ಯೆ: 0836- 2443414, 0836-2443415, 0836 - 2443416 ಗೆ ಕರೆ ಮಾಡಬೇಕಾಗಿದೆ ಎಂದು ತಿಳಿಸಲಾಗಿದೆ.

# ‘ಸಿಇಟಿ ಕೌನ್ಸಿಲಿಂಗ್ ಮಾರ್ಗದರ್ಶಿ’ ನೇರ ಫೋನ್ ಇನ್ ಬಾನುಲಿ ಕಾರ್ಯಕ್ರಮ

**ಕೊಂಕಣವಾಹಿನಿ ನ್ಯೂಸ್,**

**ಹಳಿಯಾಳ :** ದ್ವಿತೀಯ ಪಿಯುಸಿ. ಮುಗಿಸಿ ಉನ್ನತ ಶಿಕ್ಷಣ ಆಕಾಂಕ್ಷಿ ವಿದ್ಯಾರ್ಥಿಗಳಿಗೋಸ್ಕರ ಕೆಎಲ್‌ಎಸ್‌ವಿಡಿಐಟಿ ಹಳಿಯಾಳವು ‘ಸಿಇಟಿ ಕೌನ್ಸಿಲಿಂಗ್ ಮಾರ್ಗದರ್ಶಿ’ ನೇರ ಫೋನ್ ಇನ್ ಬಾನುಲಿ ಕಾರ್ಯಕ್ರಮವನ್ನು ಜುಲೈ 18 ರಂದು ಆಯೋಜಿಸಿದೆ.

ಆಕಾಶವಾಣಿ ಧಾರವಾಡ ಕೇಂದ್ರದ 765ಕಿಲೊ ಹರ್ಟ್ಸ್ ಕಂಪನಾಂಕದಲ್ಲಿ ಬೆಳಿಗ್ಗೆ 11.0 ರಿಂದ ಮಧ್ಯಾಹ್ನ 12.00 ರ



ವರೆಗೆ ಜರುಗಲಿರುವ ಈ ಕಾರ್ಯಕ್ರಮಕ್ಕೆ ವಿಷಯ ತಜ್ಞರಾಗಿ ಶಿರಸಿ ಮಾರಿಕಾಂಬಾ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ಭಾಲಚಂದ್ರ ಭಟ್, ವಿ. ಡಿ. ಐ. ಟಿ. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥರು ಹಾಗೂ ಈ ಕಾರ್ಯಕ್ರಮದ ಸಂಚಾಲಕರಾದ ಡಾ. ಮಹೇಂದ್ರ ದೀಕ್ಷಿತ್, ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ಸುಧೀರ್ ಕುಲಕರ್ಣಿ ಅವರು ಉಪಸ್ಥಿತರಿರಲಿದ್ದಾರೆ . ಸಿ. ಇ. ಟಿ. ಕೌನ್ಸಿಲಿಂಗ್ ನಲ್ಲಿ ಆಯ್ಕೆ ಪ್ರಕ್ರಿಯೆ, ಸೀಟು ಆಯ್ಕೆ ಪ್ರಕ್ರಿಯೆ ಹಾಗೂ ಇನ್ನೂ ಹತ್ತು ಹಲವು ಸೂಕ್ಷ್ಮ ಮತ್ತು ಉಪಯುಕ್ತ ಮಾಹಿತಿ ನೀಡಲಿದ್ದಾರೆ.

ವಿದ್ಯಾರ್ಥಿಗಳಲ್ಲಿ ಸಿ. ಇ. ಟಿ. ಪ್ರಕ್ರಿಯೆ ಕುರಿತು ಇರುವ ಸಂದೇಹಗಳನ್ನು ನಿವಾರಿಸಲಿದ್ದಾರೆ. ಈ ಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳಲು ಕರೆ ಮಾಡಬೇಕಾಗಿರುವ ದೂರವಾಣಿ ಸಂಖ್ಯೆ 0836– 2443414, 0836– 2443415, 0836 – 2443416.